# ಸೋಲುಗಳೇ ಜೀವನದ ಸೊಬಗು

ವಿರಾಜ, ಮಂಗಲಗಿ



ಜೀವನದಲ್ಲಿ ಎಲ್ಲರೂ ಗೆಲುವನ್ನೇ ಬಯಸುತ್ತಾರೆ, ಆದರೆ ಸೋಲುಗಳೇ ಪ್ರತಿಯೊಂದು ಗೆಲುವನ್ನು ತಂದುಕೊಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ ಎಂಬ ಸತ್ಯವನ್ನು ಎಲ್ಲರೂ ಮರೆಯುತ್ತಾರೆ. ಈ ಪ್ರೇರಣಾತ್ಮಕ ಅಂಶದ ಕಡೆಗೆ ಬೆಳಕು ಚೆಲ್ಲುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವು ಬಗೆಯ ಸೇವಾಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

‘‘**ಸೋ**ಲುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡಿ: ಜೀವನದಲ್ಲಿ ಸೋಲು ಸಂಭವಿಸುವುದು ತೀರ ಸಹಜ. ಅಷ್ಟೇ ಅಲ್ಲ, ಸೋಲುಗಳೇ ಜೀವನದ ಸೊಬಗು! ಸೋಲೇ ಇಲ್ಲದ ಜೀವನ ಅದೆಂಥ ಜೀವನ! ಹೋರಾಟವೇ ಇಲ್ಲದೆ ಸಾಗುವ ಬದುಕಿನಲ್ಲಿ ಸ್ವಾರಸ್ಯವೇನಿದೆ? ಹೋರಾಟವಿಲ್ಲದಿದ್ದರೆ ಜೀವನದಲ್ಲಿ ಕಾವ್ಯರಸವೇ ಇರಲಾರದು. ಆದ್ದರಿಂದ ಹೋರಾಟದ ವೇಳೆಯಲ್ಲಿ ಆಗುವ ತಪ್ಪುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಕೊರಗುತ್ತ ಕುಳಿತಿರಬೇಡಿ’’ — ಇವು ಸ್ವಾಮಿ ವಿವೇಕಾನಂದರ ಧೀರೋದಾತ್ತ ನುಡಿಗಳು.

ಪ್ರತಿಯೊಬ್ಬ ವ್ಯಕ್ತಿಯು ಜೀವನದಲ್ಲಿ ಆದರ್ಶ ಸಾಧನೆಗೆ ಹೊರಟಾಗ ಸೋಲು ಸಂಭವಿಸುವುದು ತೀರ ಸಹಜ. ಆದರೆ ಪ್ರತಿ ಸಲ ಸೋತಾಗಲೂ ದೃಢವಾದ ಮನಸ್ಸಿನಿಂದ ಪ್ರಯತ್ನದಲ್ಲಿ ತೊಡಗಿದಾಗ ಮಾತ್ರ ಗೆಲವು ಖಚಿತ. ಪ್ರತಿಯೊಬ್ಬ ವ್ಯಕ್ತಿಯೂ ಹಲವು ಸೋಲುಗಳನ್ನು ದಾಟಿಯೇ ಯಶಸ್ಸಿನ ಶಿಖರವನ್ನು ಏರುತ್ತಾನೆ. ಜೀವನದಲ್ಲಿ ಯಾವತ್ತೂ ಸೋತೇ ಇಲ್ಲ ಎನ್ನುವ ವ್ಯಕ್ತಿಯೇ ಇಲ್ಲ. ವ್ಯಕ್ತಿ ಸೋತಿಲ್ಲ ಎಂದರೆ ಅವನು ಮುಂದುವರಿಯುತ್ತಿಲ್ಲ ಎಂದರ್ಥ. ‘ನಡೆಯುವವನು ಎಡುವುತ್ತಾನೆಯೇ ಹೊರತು ಕುಳಿತಿರುವವನಲ್ಲ.’ ನೆಲದ ಮೇಲೆ ಬಿದ್ದಾಗ ನೆಲವನ್ನೇ ಆಧರಿಸಿ ಮೇಲೇರಿ ನಿಂತಂತೆ, ಪ್ರತಿಬಾರಿ ಸೋತಾಗಲೂ ಆ ಸೋಲಿನಿಂದಲೇ ಪಾಠವನ್ನು ಕಲಿತು ಗೆಲುವಿನೆಡೆಗೆ ಸಾಗಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ‘‘Hold the Ideal thousand times, if you fail try it once more.’’ ಅಂದರೆ ನಿಮ್ಮ ಆದರ್ಶ ಸದಾ ಕಣ್ಮುಂದಿರಲಿ. ಪ್ರಯತ್ನ ಸಾಗುತ್ತಿರಲಿ! ನಡುನಡುವೆ ಎಡವಿ ದರೂ ಪಟ್ಟುಬಿಡದೆ ಸಾವಿರ ಸಲ ಯತ್ನಿಸಿ. ಆ ಸಾವಿರ ಸಲ ಸೋತರೆ ಮತ್ತೊಮ್ಮೆ ಪ್ರಯತ್ನಿಸಿ. ಆದ್ದರಿಂದಲೇ ‘ಸೋಲು ಗೆಲುವಿನ ಮೆಟ್ಟಿಲು’ ಎನ್ನುತ್ತಾರೆ.

ಸೋಲು ಸಂಭವಿಸಿದಾಗ ಸೋಲನ್ನು ಒಪ್ಪಿಕೊಳ್ಳದೆ ಮತ್ತೆ ಪ್ರಯತ್ನಪಡುವುದೊಂದು ಶ್ರೇಷ್ಠವಾದ ಗುಣ. ಸೋಲಿಗೆ ತಲೆಬಾಗದ ಗುಣ ಪ್ರತಿಯೊಬ್ಬರಲ್ಲೂ ಇದೆ. ಸೋಲು, ವೈಫಲ್ಯ, ನೋವುಗಳನ್ನು ವ್ಯಕ್ತಿ ಎಷ್ಟೆಂದರೂ ಹೃತ್ಪೂರ್ವಕವಾಗಿ ಸ್ವೀಕರಿಸಲಾರ. ಅಂತಹ ಸಂದರ್ಭಗಳಲ್ಲಿ ಅವನ ಮನಸ್ಸು ದಂಗೆಯೇಳುತ್ತದೆ. ಸಕಾರಾತ್ಮಕ ದೃಷ್ಟಿಯಿಂದ ಕೂಡಿದ ವ್ಯಕ್ತಿ ಆ ಸಂದರ್ಭವನ್ನು ಒಂದು ಸವಾಲಾಗಿ ಸ್ವೀಕರಿಸಿ, ಮತ್ತೊಮ್ಮೆ ಪ್ರಯತ್ನಪಡುತ್ತಾನೆ. ಆದರೆ ನಕಾರಾತ್ಮಕ ವ್ಯಕ್ತಿ ಸೋಲಿನಿಂದ ಹಿಂಜರಿದು, ಪ್ರಯತ್ನವನ್ನು ಮುಂದುವರೆಸದೆ ನಿಂತ ನೀರಾಗುತ್ತಾನೆ.

ಸೋಲಿಗೆ ಕಾರಣ ನಮ್ಮ ಲೋಪದೋಷಗಳೇ ಹೊರತು ಯಾವ ಬಾಹ್ಯ ವ್ಯಕ್ತಿ-ಸನ್ನಿವೇಶಗಳಲ್ಲ. ಸೋಲು ಎಂದು ಹೇಳಿ

ದಾಗ ನಮ್ಮೊಳಗಿರುವ ಅನಂತ ಶಕ್ತಿ, ಅನಂತ ಜ್ಞಾನವನ್ನು ವ್ಯಕ್ತ ಪಡಿಸಲು ನಾವು ಸರಿಯಾದ ಪ್ರಯತ್ನವನ್ನು ಮಾಡಿಲ್ಲ ಎಂದರ್ಥ. ಆದ್ದರಿಂದ ಸೋಲಿನಿಂದ ಧೃತಿಗೆಡದೆ, ಸೋಲಿನ ಕಾರಣವನ್ನು ಕಂಡುಹಿಡಿದು ಪ್ರಾಮಾಣಿಕ ಪ್ರಯತ್ನವನ್ನು ಮುಂದುವರಿಸ ಬೇಕು. ನಾವು ಯಾವುದೇ ಕಾರ್ಯಸಾಧನೆಯಲ್ಲಿ ವಿಫಲ ರಾದಾಗ, ಹತಾಶರಾಗದೆ ವಾಸ್ತವ ದೃಷ್ಟಿಯಿಂದ ಆ ವಿಫಲತೆಗೆ ಕಾರಣವೇನು ಎಂಬುದನ್ನು ತಿಳಿಯಲು ಪ್ರಯತ್ನಿಸಬೇಕು. ಆಗ ನಾವು ಸೋಲಿನಿಂದಲೇ ಅನೇಕ ಪಾಠಗಳನ್ನು ಕಲಿಯುತ್ತೇವೆ.

''ಜಗತ್ತಿನ ಇತಿಹಾಸವನ್ನು ಅವಲೋಕಿಸಿದಾಗ ಮಹಾನ್ ವ್ಯಕ್ತಿಗಳ ಜೀವನವನ್ನು ರೂಪಿಸುವಲ್ಲಿ ಗೆಲುವಿಗಿಂತ ಸೋಲುಗಳು, ಸುಖಕ್ಕಿಂತ ದುಃಖವೇ ಹೆಚ್ಚಾದ ಶಿಕ್ಷಣವನ್ನು ಕೊಟ್ಟು ಬುದ್ಧಿ ಕಲಿಸಿ ತೆಂದೂ, ಐಶ್ವರ್ಯಕ್ಕಿಂತ ದಾರಿದ್ರ್ಯವೇ ಅಧಿಕವಾಗಿ ಹಾಗೂ ಮನುಷ್ಯನಲ್ಲಿ ಅಡಗಿರುವ ಅಪಾರವಾದ ಶಕ್ತಿಯನ್ನು ಹೊರಗೆಡಹಿ ದುದು ಹೊಗಳಿಕೆ ಅಲ್ಲ, ಪೆಟ್ಟುಗಳು ಎಂದು ನಾನು ಧೈರ್ಯವಾಗಿ ಹೇಳುತ್ತೇನೆ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಹೀಗೆ ಸೋಲು ಗೆಲುವಿನ ಮೆಟ್ಟಿಲಾಗುತ್ತದೆ. ನಾವು ನೆನಪಿಡ ಬೇಕು, ಯಾವ ಸೋಲೂ ಶಾಶ್ವತವಾದುದಲ್ಲ. ಪ್ರತಿಯೊಂದು ಸೋಲೂ ನಮಗೊಂದು ಪಾಠವನ್ನು ಕಲಿಸಿಕೊಟ್ಟು ಉನ್ನತಿ ಯೆಡೆಗೆ ಕರೆದೊಯ್ಯುತ್ತದೆ. ಅದೇ ರೀತಿ ಯಾವ ಗೆಲುವೂ ಶಾಶ್ವತವಲ್ಲ, ನಮ್ಮೊಬ್ಬರಿಗೆ ಮೀಸಲೂ ಅಲ್ಲ. ಆದ್ದರಿಂದ ನಾವು ಒಂದು ಸನ್ನಿವೇಶವನ್ನು ಸೋಲು-ಗೆಲುವಿನ ದೃಷ್ಟಿಯಿಂದ ನೋಡದೆ ಯಥಾರ್ಥ ದೃಷ್ಟಿಯಿಂದ ನೋಡುವುದನ್ನು ಕಲಿ ಯುವುದಾದರೆ ಚಾರಿತ್ರ್ಯನಿರ್ಮಾಣದ ಹಾದಿಯಲ್ಲಿ ಬಹುದೊಡ್ಡ ಹೆಜ್ಜೆಯನ್ನು ಇಟ್ಟಂತಾಗುತ್ತದೆ. ಸ್ವಾಮಿ ವಿವೇಕಾನಂದರು ಹೇಳು ತ್ತಾರೆ: ''ಒಂದು ಹಸು ಎಂದಿಗೂ ಸುಳ್ಳು ಹೇಳುವುದಿಲ್ಲ. ಒಂದು ಗೋಡೆ ಎಂದಿಗೂ ಸುಳ್ಳು ಹೇಳುವುದಿಲ್ಲ. ಆದರೆ ಅದು ಯಾವಾ ಗಲೂ ಒಂದು ಹಸು, ಒಂದು ಗೋಡೆಯಾಗಿಯೇ ಉಳಿಯು ತ್ತದೆ. ಆದರೆ ಮನುಷ್ಯ ಸುಳ್ಳು ಹೇಳಬಹುದು, ಮೋಸಮಾಡ ಬಹುದು. ತನ್ನನ್ನು ತಾನು ತಿದ್ದಿಕೊಳ್ಳುವುದರ ಮೂಲಕ ಮಹಾ ಮಹಿಮನಾಗುತ್ತಾನೆ.'' ಆದ್ದರಿಂದ ಮಾನವ ಸಾಧಿಸಬಹುದಾ ದ್ದನ್ನು ಬೇರಾವ ಜೀವಿಯೂ ಸಾಧಿಸಲಾರದು. ಇಂತಹ ಅಮೂಲ್ಯ ಸಾಧ್ಯತೆಯನ್ನು ಹೊಂದಿದ ಮನುಷ್ಯ ಸೋಲಿನಿಂದ ಎದೆಗೆಟ್ಟು ಮುಂದುವರಿಯುವುದನ್ನು ನಿಲ್ಲಿಸಿದರೆ ಅದೆಂತಹ ದೊಡ್ಡ ಹಾನಿಯಾಗುತ್ತದೆ!

ಸೋಲಿನ ಹಾದಿಯನ್ನೇ ನಡೆದು ಗೆಲುವನ್ನು ಕಂಡವರ ಉದಾಹರಣೆ ಅಸಂಖ್ಯ. ೧೮೩೧ ರಿಂದ ೧೮೬೦ರ ವರೆಗೆ ನಿರಂ ತರವಾಗಿ ೧೬ ಬಾರಿ ಸೋತು ಅಮೇರಿಕಾದ ಅಧ್ಯಕ್ಷರಾಗಿದ್ದ ಮಹಾನ್ ವ್ಯಕ್ತಿ ಅಬ್ರಾಹಂ ಲಿಂಕನ್; ಸೋಲುಗಳನ್ನೇ ಮೆಟ್ಟಿಲು ಗಳನ್ನಾಗಿ ಮಾಡಿಕೊಂಡು ಹಬೆಯಂತ್ರವನ್ನು (Steam Engine) ಕಂಡುಹಿಡಿದ ಜೇಮ್ಸ್‌ವ್ಯಾಟ್; ಅನೇಕ ಬಾರಿ ಮೌಂಟ್ ಎವರೆಸ್ಟ್ ಶಿಖರವನ್ನು ಹತ್ತುವಾಗ ವಿಫಲವಾಗಿ, ಕೊನೆಗೆ ಯಶಸ್ಸನ್ನು ಕಂಡ ತೇನ್‌ಸಿಂಗ್; ಸೋಲಿನಿಂದ ಧೃತಿಗೆಡದೆ ಅತಿ ಕಿರಿಯ ವಯಸ್ಸಿನಲ್ಲಿ ಜಗತ್ತಿನ ಆರೂ ಖಂಡಗಳಲ್ಲಿನ ಅತಿ ಎತ್ತರದ ಶಿಖರಗಳನ್ನು ಏರಿದ ಕೆನ್ ನೊಗುಚಿ; ಅಂಗವಿಕಲರಾದರೂ ಸೋಲಿನ ಅಂಗಳದಿಂದ ಯಶಸ್ಸಿನ ಬಾನಿಗೆ ಜಿಗಿದ ಬೀಥೋವನ್; ಸಾವಿರ ಬಾರಿ ಸೋತು ವಿದ್ಯುತ್ ದೀಪವನ್ನು ಕಂಡುಹಿಡಿದ ಥಾಮಸ್ ಅಲ್ವಾ ಎಡಿಸನ್ – ಹೀಗೆ ಜಗತ್ತಿನಲ್ಲಿ ಸೋಲಿಗೆ ಹೆದರಿದ್ದರೆ ಇವರು ಮತ್ತು ಇವರಂತೆ ನೂರಾರು ಜನರು ಹೊಸದನ್ನು ಕೊಡಲು ಮತ್ತು ಅಸಾಮಾನ್ಯರಾಗಲು ಸಾಧ್ಯವಾಗುತ್ತಿರಲಿಲ್ಲ. ಮಹತ್ತರವಾದು ದನ್ನು ಸಾಧಿಸಲು ಹೊರಟಾಗ ಸೋಲು ಸಂಭವಿಸುವುದು ತೀರ ಸಹಜ. ಆದರೆ ಅದು ಶಾಶ್ವತವಾದ ಸೋಲಲ್ಲ. ಆ ಪ್ರತಿಯೊಂದು ಸೋಲಿನ ಮೂಲಕವೇ ನಾವು ಒಂದೊಂದು ಗೆಲುವಿನ ಮೆಟ್ಟಿ ಲನ್ನು ಹತ್ತುತ್ತೇವೆ. ಥಾಮಸ್ ಅಲ್ವಾ ಎಡಿಸನ್ ಸುಮಾರು ಎರಡು ಸಾವಿರ ಸಾಮಗ್ರಿಗಳನ್ನು ಇಟ್ಟುಕೊಂಡು ವಿದ್ಯುತ್ ಬಲ್ಬ್‌ಗಳಿಗಾಗಿ ಸಂಶೋಧನೆ ನಡೆಸುತ್ತಿದ್ದರು. ಏನೇ ಮಾಡಿದರೂ ಕೆಲಸ ತೃಪ್ತಿ ಕರವಾಗಿ ಸಾಗುತ್ತಿರಲಿಲ್ಲ. ಅವರ ಸಹಾಯಕ ಸಹನೆ ಕಳೆದು ಕೊಂಡು ಹೇಳಿದ: ''ನಮ್ಮ ಎಲ್ಲಾ ಕೆಲಸಗಳೂ ನಿಷ್ಪ್ರಯೋಜಕ ವಾದವು. ಇದರಿಂದ ನಾವೇನೂ ಕಲಿಯಲಿಲ್ಲ. ಎಲ್ಲವೂ ವ್ಯರ್ಥ ವಾಯಿತು.'' ಆಗ ಎಡಿಸನ್ ತುಂಬ ಆತ್ಮವಿಶ್ವಾಸದಿಂದ ನುಡಿ ದರು, ''ಓಹ್! ನಾವು ತುಂಬಾ ದೂರ ಸಾಗಿದ್ದೇವೆ. ಇದರಿಂದ ನಾವು ಸಾಕಷ್ಟು ಕಲಿತಿದ್ದೇವೆ. ಒಳ್ಳೆಯ ಬಲ್ಬ್ ತಯಾರಿಕೆಗೆ ಈ ಎರಡು ಸಾವಿರ ಸಾಮಗ್ರಿಗಳೂ ಪ್ರಯೋಜನಕ್ಕೆ ಬರಲಾರವು ಎಂಬುದನ್ನು ಕಂಡುಕೊಂಡೆವು'' ಎಂಥ ಅದ್ಭುತ ವಾದ ಮಾತು! ಯಾವ ಶ್ರೇಷ್ಠ ವ್ಯಕ್ತಿಯೂ ಸೋಲನ್ನು ಎದುರಿಸದೆ ಮಹತ್ತರ ವಾದದ್ದೇನನ್ನೂ ಸಾಧಿಸಿಲ್ಲ ಎಂಬುದು ನಮ್ಮ ಆತ್ಮವಿಶ್ವಾಸ ವನ್ನು ಕೆರಳಿಸಬೇಕು. ''ನಮ್ಮ ಶ್ರೇಷ್ಠ ವೈಭವವೆಂದರೆ ವಿಫಲವಾಗದೆ ಇರುವುದಲ್ಲ, ಆದರೆ ಪ್ರತಿಬಾರಿ ವಿಫಲವಾದಾಗಲೂ ಎದ್ದು ಮುನ್ನಡೆಯುವುದು'' ಎಂಬುದು ಒಬ್ಬ ಚಿಂತಕರ ಅಭಿಪ್ರಾಯ. ಕೆಲವರು ವಿಫಲರಾದಾಗ, ಯಾವುದನ್ನೇ ಸಾಧಿಸಲು ತಮಗೆ ಸಾಧ್ಯವಾಗದೆ ಹೋದಾಗ ಅವರಿಗೆ ತಮ್ಮ ಬಗ್ಗೆಯೇ ಕೀಳರಿಮೆ ಉಂಟಾಗಿ ತಮ್ಮನ್ನು ತಾವೇ ದ್ವೇಷಿಸಲು ಪ್ರಾರಂಭಿಸುತ್ತಾರೆ. ಅದು ನಕಾರಾತ್ಮಕ ಅಹಂಕಾರ. ಸ್ವಾಮಿ ವಿವೇಕಾನಂದರು ಹೇಳು ತ್ತಾರೆ: ''ಯಾವ ವ್ಯಕ್ತಿಯು ತನ್ನನ್ನು ತಾನೇ ದ್ವೇಷಿಸಲು ಪ್ರಾರಂ ಭಿಸುತ್ತಾನೋ ಅವನ ಅವನತಿಯ ಬಾಗಿಲು ಆಗಲೇ ತೆರೆದಂತೆ... ನಮ್ಮ ಪ್ರಥಮ ಕರ್ತವ್ಯವೇ ನಮ್ಮನ್ನು ನಾವು ದ್ವೇಷಿಸದಿರುವುದು.''

ನಿಜ, ಸೋಲು ಬರಲಿ ಎಂದು ನಾವು ಕಾಯುವುದು ಬೇಡ. ಉದ್ದೇಶಪೂರ್ವಕ ಎಚ್ಚರಗೇಡಿಗಳಾಗಿ ಪ್ರಯತ್ನವನ್ನು ಬಿಡು ವುದು ಬೇಡ. ಗೆಲುವಿನ ಯತ್ನದಲ್ಲಿಯೇ ಸಾಗುವಾಗ ಅನಿ ವಾರ್ಯವಾಗಿ ಇದಿರಾಗುವ ಸೋಲುಗಳನ್ನು ಸ್ವೀಕರಿಸೋಣ. ಸೋಲು ಗೆಲುವುಗಳು ಜೀವನಚಕ್ರದ ಅನಿವಾರ್ಯ ಮುಖ ಗಳೆಂದು ಬಗೆದು ನಿರಾಶರಾಗದಿರೋಣ. ನಮಗೆ ಸೋಲು

ಬರಲೇಬಾರದೆಂಬ ಧಾರ್ಷ್ಟ್ಯ ಬೇಡ. ಸೋಲು ಬಂದಾಗ ಕುಸಿದು ಹೋಗುವುದು ಬೇಡ. ಸೋಲುಗಳೇ ಧೀರನಿಗೆ ಭೂಷಣ. ಜೀವನದಲ್ಲಿ ಗೆಲುವನ್ನು ಸಾಧಿಸುವ ಪಾಠವನ್ನು ಕಲಿಯುವ ಹಾಗೆಯೇ, ಸೋಲನ್ನು ದಿಟ್ಟತನ, ನಿರ್ಲಿಪ್ತತೆಯಿಂದ ಎದುರಿಸುವ ಪಾಠವನ್ನು ಕಲಿಯೋಣ. ಸಾಧಕನಿಗೆ ಸೋಲುಗಳು ಅವನ ದುರಹಂಕಾರವನ್ನು ಮುರಿದು ಹಾಕಿ, ಭಗವಂತನಲ್ಲಿ ಶರಣಾಗತಿಯ ಪಾಠವನ್ನು ಕಲಿಸುತ್ತವೆ. ನಮ್ಮ ಸೋಲಿನಿಂದ ನಾವು ಭಗವಂತನಿಗೆ ಹತ್ತಿರವಾಗುವುದಾದರೆ ಸೋಲುಗಳೇ ನಮ್ಮ ಪಾಲಿಗೆ ಬರಲಿ. ನಮ್ಮ ಗೆಲುವಿನಿಂದ ಭಗವದಿಚ್ಛೆ ಈಡೇರುವುದಾದರೆ ಗೆಲುವು ನಮ್ಮದಾಗಲಿ. ಕೊನೆಗೂ ಸೋಲು-ಗೆಲುವುಗಳು ಜಗತ್ತಿನ ದೃಷ್ಟಿಯಿಂದ ಮಾತ್ರ. ಆ ಎರಡರ ಮೂಲಕ ನಾವು ಗಳಿಸಿದ ಚಾರಿತ್ರ್ಯ ಪರಿಪಾಕವೇ ಮುಖ್ಯವಾದದ್ದು. ಐನ್‌ಸ್ಟೈನ್ ಹೇಳುತ್ತಾರೆ: ‘‘ಜೀವನದಲ್ಲಿ ಕೇವಲ ಯಶಸ್ವಿಯಾಗಬೇಕೆಂದು ಬಯಸಬೇಡಿ. ಚಾರಿತ್ರ್ಯವಂತರಾಗಲು ಪ್ರಯತ್ನಿಸಿ.’’ ಡಿ.ವಿ.ಜಿ. ಹೇಳುತ್ತಾರೆ:

ಏಸು ಸಲ ತಪವಗ್ಯೈದೇಸು ಬನ್ನವನಾಂತ ।
ಕೌಶಿಕಂ ಬ್ರಹ್ಮರ್ಷಿಪದಕರ್ಹನಾದನ್ ॥
ಘಾಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ।
ಲೇಸಾಗಿಸಾತ್ಮವನು — ಮಂಕುತಿಮ್ಮ ॥

ಬಾಬಾ ಆಮ್ಟೆಯವರ ತಾಯಿ ಹೆಚ್ಚು ಓದದಿದ್ದರೂ ಬಹಳ ಬುದ್ಧಿಶಾಲಿಯಾಗಿದ್ದರು. ಯಾವ ವಿಷಯವನ್ನಾದರೂ ಬಹಳ ಪ್ರಭಾವಶಾಲಿ ಕಥೆಗಳ ಮೂಲಕ ಮನಸ್ಸಿಗೆ ನಾಟುವಂತೆ ಬೋಧಿಸುವ ಕಲೆ ಅವರಿಗೆ ಸಿದ್ಧಿಸಿತ್ತು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವರ ಪಾತ್ರ ಪ್ರಮುಖವಾದದ್ದು. ಒಮ್ಮೆ ಅವರು ಬಾಬಾ ಆಮ್ಟೆಗೆ ಒಂದು ಜಪಾನೀ ಬೊಂಬೆಯನ್ನು ಖರೀದಿಸಿ ತಂದು ಕೊಟ್ಟರು. ಅದು ಎಷ್ಟು ಸಲ ಬೀಳುತ್ತಿತೋ ಅಷ್ಟೇ ಸಲ ಎದ್ದು ನಿಲ್ಲುತ್ತಿತ್ತು. ಆ ಬೊಂಬೆಯನ್ನು ಮಗನಿಗೆ ಕೊಡುತ್ತಾ, ‘‘ಮಗು, ಈ ಬೊಂಬೆಯನ್ನು ಬೀಳಿಸುತ್ತಾ ಬೀಳಿಸುತ್ತಾ ನೀನು ಸುಸ್ತಾಗುವೆಯಷ್ಟೆ. ಆದರೆ ಅದು ಪ್ರತಿ ಸಲ ಬಿದ್ದಾಗಲೂ ಎದ್ದು ನಿಲ್ಲುತ್ತದೆ’’ ಎಂದರು. ‘‘ಇದೇ ರೀತಿ ನೀನೂ ಸಹ ಜೀವನದಲ್ಲಿ ಅನೇಕ ಸಲ ಬೀಳಬಹುದು. ಯಾವಾಗಲೂ ಸಫಲತೆ ದೊರೆಯದು. ಆದರೆ ನಿಜವಾದ ಘನತೆ ಇರುವುದು ಬಿದ್ದನಂತರ ತಕ್ಷಣ ಏಳುವುದರಲ್ಲಿದೆ. ಸೋತರೂ ಸಹ ಸೋಲಿನಿಂದ ಕುಗ್ಗದಿರುವುದು — ಇದೇ ಬದುಕಿನ ಇನ್ನೊಂದು ಹೆಸರು’’ ಎಂದು ಆಮ್ಟೆಯವರ ತಾಯಿ ನುಡಿದರು. ತಾಯಿಯ ಈ ಅಮೂಲ್ಯವಾದ ಸಲಹೆಯನ್ನು ಬಾಬಾ ಆಮ್ಟೆ ಚೆನ್ನಾಗಿ ಗ್ರಹಿಸಿದರು. ಇದನ್ನೇ ಆದರ್ಶವಾಗಿಟ್ಟುಕೊಂಡು ಅನೇಕ ಕಷ್ಟ ವಿಪತ್ತು ಗಳು ಬಂದರೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ, ತಲೆಯೆತ್ತಿ ಭಾರತದಾದ್ಯಂತ ಓಡಾಡಿದರು. ಅಸಂಖ್ಯ ಕುಷ್ಟರೋಗಿಗಳಿಗೆ ಸೇವೆಯನ್ನು ಸಲ್ಲಿಸಿ, ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮಹಾನ್ ಚೇತನವಾದರು.


ವಿಶ್ವ ವಿಹಾರ್ ಟ್ರಾವೆಲ್ ಆ್ಯಂಡ್ ಟೂರ್ಸ್
ವಿದೇಶಿ ಪ್ರವಾಸ ರಿಯಾಯತಿ ದರದಲ್ಲಿ
10 ದಿನಗಳ ಜೋರ್ಡಾನ್, ಇಸ್ರೇಲ್ ಮತ್ತು ಈಜಿಪ್ಟ್ ಪ್ರವಾಸ
5 ದಿನಗಳ ದುಬೈ ಪ್ರವಾಸ
6 ದಿನಗಳ ಶ್ರೀಲಂಕಾ ಪ್ರವಾಸ
7 ದಿನಗಳ ಸಿಂಗಾಪುರ ಮತ್ತು ಮಲೇಶಿಯ ಪ್ರವಾಸ
5 ದಿನಗಳ ಅಂಡಮಾನ್ ಪ್ರವಾಸ
19 ದಿನಗಳ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಪ್ರವಾಸ
7 ದಿನಗಳ ಜಪಾನ್ ಪ್ರವಾಸ
18 ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ
ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ
ನಂ. 114, 4ನೇ ಮಹಡಿ, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ಸರ್ಕಲ್, ಬೆಂಗಳೂರು – 560004
ದೂರವಾಣಿ: 080-40916012 • ಮೊಬೈಲ್: 9844166555 • www.vishwavihartours.com